ತ್ತಿದ್ದಂತೆಯೇ ಆಗಸ್ಟ್, ಸೆಪ್ಟೆಂಬರ್ ಬಂತು. ಭಗವಂತನ ಕೃಪೆಯಿಂದ ಚೆನ್ನಾಗಿ ಮಳೆಯಾಯಿತು. ಎಲ್ಲೆಲ್ಲೂ ಬಿತ್ತನೆಯ ಕೆಲಸ ಶುರುವಾಗಿ ಬರಗಾಲದ ಸೇವಾಕಾರ್ಯಗಳು ಕೊನೆಗೊಳ್ಳುತ್ತಿತ್ತು. ನನಗೆ ಮತ್ತು ಸ್ವಾಮಿ ಅಚಲಾನಂದರಿಗೆ ಸೇವಾಕಾರ್ಯ ಇಷ್ಟು ಬೇಗ ನಿಲ್ಲಿಸಲು ಮನಸ್ಸಿರಲಿಲ್ಲ. ಮೊದಲೇ ತಿಳಿಸಿದಂತೆ ಸರ್ಕಾರದಿಂದ ನಾವು ಗೋಧಿ ಕೊಳ್ಳುತ್ತಿದ್ದೆವು. ಸೆಪ್ಟೆಂಬರ್ ತಿಂಗಳಿಗೆ ರೇಷನ್ ಕೊಟ್ಟು ನಮ್ಮ ಬರಗಾಲದ ಸೇವಾಕಾರ್ಯ ಮುಗಿಸುವುದೆಂದು ತೀರ್ಮಾನಿಸಲಾಯಿತು. ಸ್ವಾಮಿ ಅಚಲಾನಂದರು ಲೆಕ್ಕ ಹಾಕಿ ನೋಡಿದರು., ಸರ್ಕಾರ ಕೊಡುತ್ತಿದ್ದ ರಿ-ಇಂಬರ್ಸ್‌ಮೆಂಟಿನಿಂದ ನಮ್ಮಲ್ಲಿ ಸುಮಾರು ರೂ. ೩೦,೦೦೦ ಉಳಿದಿತ್ತು. ಆ ಕಾಲದಲ್ಲಿ ಅದು ದೊಡ್ಡ ಮೊತ್ತವೇ. ಕುಷ್ಠರೋಗಿಗಳಿಗೆ ವಸತಿ ಕೆಲಸ ಶುರುಮಾಡುವುದು, ನಂತರ ಹಣ ಬರಬಹುದು ಎಂದು ಯೋಚಿಸಿದೆವು, ಸುಮಾರು ಆಗಸ್ಟ್ ತಿಂಗಳಿನಿಂದಲೇ ಈ ಸಂಬಂಧವಾಗಿ ವಿಚಾರಣೆ ಇತ್ಯಾದಿ ನಡೆಯುತ್ತಿತ್ತು. ಸರ್ಕಾರ ಅವರಿಗೆ ವಸತಿಗೋಸ್ಕರ ಸುಮಾರು ೨-೩ ಕಿ.ಮೀ. ದೂರದಲ್ಲಿ ಜಾಗ ಕೊಟ್ಟಿತ್ತು. ಆದರೆ ಅವರು ಊಟ, ಭಿಕ್ಷೆ ಇತ್ಯಾದಿಗಳಿಗೆ ಗಾಣಗಾಪುರಕ್ಕೇ ಬರಬೇಕಾದ್ದರಿಂದ ಅದು ಅನಾನುಕೂಲಕರವಾಗಿತ್ತೇ ಹೊರತು ಪ್ರಯೋಜನವಾಗುವಂತಿರಲಿಲ್ಲ. ಅವರಿದ್ದ ಗುಡಿಸಿಲುಗಳ ಹತ್ತಿರದಲ್ಲೇ ಖಾಸಗಿ ಜಾಗವಿತ್ತು. ಸ್ವಾಮಿ ಅಚಲಾನಂದರು ಅದನ್ನು ಕೊಂಡು, ಅದರಲ್ಲಿ ವಸತಿಗೃಹಗಳನ್ನು ಕಟ್ಟುವ ಪ್ರಯತ್ನ ಮಾಡಿದರು. ಸ್ವಾಮಿಗಳು ಕೊಳ್ಳುವರೆಂದು ತಿಳಿದ ಜಮೀನಿನ ಮಾಲೀಕರು ಎರಡರಿಂದ ನಾಲ್ಕು ಪಟ್ಟು ಬೆಲೆ ಜಾಸ್ತಿ ಮಾಡಿದರು. ಸ್ವಾಮಿ ಅಚಲಾನಂದರು ಎಷ್ಟೇ ಪ್ರಯತ್ನಿಸಿದರೂ ಅವರ ಮನಸ್ಸು ಪರಿವರ್ತನೆಯಾಗಲಿಲ್ಲ. ಸ್ವಾಮಿಗಳು ಶ್ರೀರಾಮಕೃಷ್ಣರ ಮೇಲೆ ಭಾರ ಹಾಕಿ ಪ್ರಯತ್ನ ಮುಂದುವರೆಸುತ್ತಿದ್ದರು.

ಬೆಂಗಳೂರು ಆಶ್ರಮದಿಂದ ದೂರವಿದ್ದುದು, ಸುಮಾರು ಆರು ತಿಂಗಳ ಸತತ ಪರಿಶ್ರಮ, ಇವೆಲ್ಲದರಿಂದ ನನಗೆ ಸ್ವಲ್ಪ ವಿಶ್ರಮಿಸುವ ಮನಸ್ಸಾಯಿತು. ಸ್ವಾಮಿ ಅಚಲಾನಂದರಿಗೆ ತಿಳಿಸಿ ೧೦-೧೫ ದಿನಗಳಿಗೋಸ್ಕರ ಬೆಂಗಳೂರು ಆಶ್ರಮಕ್ಕೆ ಬಂದೆ. ಮರುದಿನ ನಮ್ಮ ಬ್ರಹ್ಮಚಾರಿಗಳೊಬ್ಬರು ನನ್ನನ್ನು ಆಶ್ಚರ್ಯದಿಂದ ನೋಡಿ, ನನಗೆ ಜ್ವರವಿರುವ ಶಂಕೆಯಿಂದ ಥರ್ಮೋಮೀಟರ್ ತಂದು ಪರೀಕ್ಷಿಸಿದಾಗ ೧೦೩˚ ಜ್ವರವಿತ್ತು. ನನಗೆ ಅದರ ಅರಿವೇ ಇರಲಿಲ್ಲ. ಅದು ಪ್ಯಾರಾ ಟೈಫ್ಯಾಡ್ ಜ್ವರ. ನಾನು ಹಿಂತಿರುಗಲು ಸುಮಾರು ಒಂದು ತಿಂಗಳಾಗಬಹುದು ಎಂದು ಅಚಲಾನಂದರಿಗೆ ತಿಳಿಯಿತು. ಕುಷ್ಠರೋಗಿಗಳ ವಸತಿ ವ್ಯವಸ್ಥೆ? ಸ್ವಾರ್ಥಿಗಳ ದುರಾಸೆಯಿಂದ ಜಾಗ ಸಿಗಲಿಲ್ಲ, ಬರಗಾಲ ಪರಿಹಾರ ಕಾರ್ಯ ಮುಗಿದಿತ್ತು. ಸೇವಾಕೇಂದ್ರವನ್ನು ಮುಚ್ಚಿ ಭಾರವಾದ ಮನಸ್ಸಿನಿಂದ ಬೆಂಗಳೂರಿಗೆ ಅಚಲಾನಂದರು ಕೂಡಾ ಹಿಂತಿರುಗಿದರು.

**ಶ್ರೀರಾಮಕೃಷ್ಣರ ಕೃಪೆ:** ಒಮ್ಮೆ ಬೇಲೂರು ಮಠದಲ್ಲಿ ದುರ್ಗಾಪೂಜೆಯ ಸಮಯದಲ್ಲಿ ಆಗಿನ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಶಿವಾನಂದರು ಅಲ್ಲಿಯದು ನಿಃಸ್ವಾರ್ಥ ದುರ್ಗಾಪೂಜೆ, ತಾಯಿ ದುರ್ಗೆಗೆ ಯಾವುದೇ ವಿಧವಾದ ಕಾಮನೆ ಇಟ್ಟುಕೊಂಡು ಪೂಜೆ ಸಲ್ಲಿಸುವುದಿಲ್ಲವೆಂದು, ಅದು ಕೇವಲ ಲೋಕಕಲ್ಯಾಣಕ್ಕೆಂದು ತಿಳಿಸಿದರು. ಬೆಂಗಳೂರಿನ ೧೯೭೩ರಲ್ಲಿ ನಡೆದ ಬರಗಾಲ ಪರಿಹಾರ ಸೇವೆ ಕೂಡ ಹಾಗೆಯೇ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಸಮಾಚಾರ ಪತ್ರಿಕೆಗಳಿಗೆ ತಿಳಿಸಿದ್ದಾಗಲಿ, ಅವುಗಳಲ್ಲಿ ಬರಗಾಲ ಪರಿಹಾರದ ಬಗ್ಗೆ ಬರೆದಿದ್ದ ವಿಷಯವಾಗಲಿ, ಅವುಗಳ ಬಗ್ಗೆ ನಮಗೆ ಕಾಳಜಿಯೇ ಇರಲಿಲ್ಲ. ವಾರ್ತಾಪತ್ರಿಕೆಯ ವರದಿಗಾರರನ್ನು ಕರೆದದ್ದಾಗಲೀ, ಅವರ ಸಮೀಕ್ಷೆಯಾಗಲೀ ಯಾವುದೂ ತಿಳಿಯದು.

೨೦-೨೫ ವರ್ಷಗಳ ನಂತರ ರಾಮಕೃಷ್ಣರ ಹೆಸರಿನಲ್ಲಿ ಸೇವೆ ನಡೆದ ಜಾಗಗಳನ್ನು ನೋಡುವ ಕುತೂಹಲವುಂಟಾಯಿತು. ೨೦೦೪ರಲ್ಲಿ ಬೆಳಗಾವಿ ಉತ್ಸವಕ್ಕೆ ಹೋಗಿದ್ದಾಗ ಗದಗಿಗೆ ಒಬ್ಬ ಸ್ವಾಮಿಗಳು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಒಂದು ರಾತ್ರಿ ಇದ್ದು ಗದುಗಿನ ವೀರನಾರಾಯಣ, ಕುಮಾರವ್ಯಾಸರ ಜಾಗ ನೋಡಿ ಗುಲ್ಬರ್ಗಕ್ಕೆ ಹೋಗಿ ಅಲ್ಲಿನ ರಾಮಕೃಷ್ಣ ಆಶ್ರಮ (ಖಾಸಗಿ ಕೇಂದ್ರ)ದಲ್ಲಿ ಒಂದು ರಾತ್ರಿ ತಂಗಿದ್ದು ಮರುದಿನ ಬಸ್ಸಿನಲ್ಲಿ ಗಾಣಗಾಪುರಕ್ಕೆ ಹೊರಟೆ. ೧೯೭೩ರಲ್ಲಿ ನಾನು ನೋಡಿದಕ್ಕೂ ಈಗ ನೋಡುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸ. ದಾರಿಯ ಇಕ್ಕೆಲಗಳಲ್ಲಿ ಹಸಿರು ತುಂಬಿದ ಹೊಲಗದ್ದೆಗಳಿದ್ದವು. ಈಗ ಒಂದು ದೊಡ್ಡ ನೀರಾವರಿ ನಾಲೆ ಇದೆ. ಸುಮಾರು ಬೆಳಿಗ್ಗೆ ೯ ಗಂಟೆಗೆ ಗಾಣಗಾಪುರದ ಬಸ್ ನಿಲ್ದಾಣದಲ್ಲಿಳಿದು, ನಡೆದುಕೊಂಡೇ ದತ್ತ ಕ್ಷೇತ್ರಕ್ಕೆ ಹೋಗಿ ದರ್ಶನ ಮಾಡಿದೆ. ಅಲ್ಲಿ ಕಂಡ ಕೆಲವರು ಹಳಬರನ್ನು ವಿಚಾರಿಸಿದೆ. ಆಗ ತಿಳಿಯಿತು – ಈಗ ಮಳೆ, ಬೆಳೆಗಳು ಆಗುತ್ತಿವೆ. ಅಂದಿನಿಂದ ಇಂದಿನವರೆಗೂ ಬರಗಾಲ ಮತ್ತೆ ಬಂದಿಲ್ಲ – ಎಂದು. ಹಾಗೆ ನಮ್ಮ ಶಿಬಿರವಿದ್ದ ಛತ್ರ ಕೂಡ ನೋಡಿದೆ. 'ದಂಡವತೆ' ಆಶ್ರಮಕ್ಕೆ ಹೋದೆ. ಅಲ್ಲಿ ಬ್ರಹ್ಮಚಾರಿ ಮಾಧವರಾವ್ ಇರಲಿಲ್ಲ. ಯಾರೋ ಗೃಹಸ್ಥರೊಬ್ಬರಿದ್ದರು. ಯಾತ್ರಿಗಳು ತಂಗಲು ಜಾಗ ದೊರೆಯುವುದೇ ಎಂದು ವಿಚಾರಿಸಿದೆ. ೧೫೦ ರೂ. ಬಾಡಿಗೆ ಕೊಡಲೇಬೇಕಾಗುತ್ತದೆಂದರು. ನಾನು ತಂಗುವುದಿಲ್ಲ, ತುಸು ಜ್ವರ ಬರುವಂತಿದೆ, ಸ್ವಲ್ಪ ವಿಶ್ರಮಿಸಿಕೊಂಡು ಹೋಗುವೆನೆಂದು ಹೇಳಿದರೂ ಅವರು ಕೇಳಲಿಲ್ಲ. ಅವರ ನಿಯಮದಂತೆ ರೂ. ೧೫೦ ತೆತ್ತು ಅಲ್ಲೇ ಮಲಗಿದೆ. ಸುಮಾರು ಮಧ್ಯಾಹ್ನ ೧೨.೩೦ಕ್ಕೆ ಯಾರೋ ಒಬ್ಬರು ಬಂದು ಊಟಮಾಡಲು ಕರೆದರು. ನಾನೂ ಹೋಗಿ ಊಟದ ಶಾಸ್ತ್ರ ಮುಗಿಸಿದೆ. ಹಿಂದೆ ನಡೆಯುತ್ತಿದ್ದ ಸೇವೆ ಈಗ ಇದ್ದಂತಿರಲಿಲ್ಲ. ಈಗ ಕೇವಲ ಹೋಟೇಲಿನಂತೆ ಆಗಿದೆ. ಅಂದಿನ ದಂಡವತೆ ಆಶ್ರಮ ಹೇಗಿತ್ತು, ಇಂದು ಹೇಗಿದೆ! ಸರಿ, ಅಲ್ಲಿಂದ ಹೊರಟೆ. ಎಲ್ಲ ಆ ಮಹಾಮಾಯೆಯ ಆಟ ಎನ್ನಿಸಿತು. ಗುಲ್ಬರ್ಗಾ ಶ್ರೀರಾಮಕೃಷ್ಣ ಆಶ್ರಮ (ಖಾಸಗಿ ಕೇಂದ್ರ) ಸೇರಿದಾಗ ಸುಮಾರು ಸಂಜೆ ೫.೩೦ – ೬ ಗಂಟೆಯಾಗಿತ್ತು.

# ಸ್ವಾಮಿ ಪ್ರೇಮಾನಂದರು

ಸ್ವಾಮಿ ಅಶೋಕಾನಂದ

ಅನುವಾದ: ಡಾ. ಇ. ವಸಂತಕುಮಾರ್



ನನ್ನ ಕಾಲೇಜು ವಿದ್ಯಾಭ್ಯಾಸದ ಕೊನೆಯ ಎರಡು ವರ್ಷಗಳಿಗೆ ಬಂಗಾಲದ ಸಣ್ಣ ಒಂದು ಪಟ್ಟಣಕ್ಕೆ ಹೋಗಲು ನಾನು ತೀರ್ಮಾನಿಸಿದ್ದೆ, ಏಕೆಂದರೆ ಅಲ್ಲಿದ್ದ ಪ್ರಿನ್ಸಿಪಾಲರು ಜಗದ್ವಿಖ್ಯಾತ ಪಂಡಿತರಾಗಿದ್ದರು. ಈ ತೀರ್ಮಾನ ಕೈಗೊಳ್ಳುವ ಸಮಯದಲ್ಲಿ ನಾನು ಬೇಲೂರು ಮಠಕ್ಕೆ ಹೋದೆ. ಸ್ವಾಮಿ ಪ್ರೇಮಾನಂದರು, ''ನೀನು ಎಲ್ಲಿ ಹೋಗಿದ್ದೆ? ನೀನು ಯಾವ ಕಾಲೇಜಿಗೆ ಸೇರಿಕೊಳ್ಳುವೆ ಎಂದು ಯೋಚಿಸುತ್ತಿದ್ದೆ.'' ಎಂದು ಹೇಳಿದರು. ನಾನು ನನ್ನ ಯೋಜನೆಯ ಬಗ್ಗೆ ತಿಳಿಸಿದೆ. ಅವರು, ''ಬೇಡ, ಹಾಗೆ ಮಾಡಬೇಡ. ನೀನು ಹಳ್ಳಿಗನಾಗಬೇಡ. ದೊಡ್ಡ ನಗರದಲ್ಲಿ ವಾಸಿಸು, ನಗರವಾಸಿಗಳ ರೀತಿನೀತಿಗಳನ್ನು ಕಲಿ'' ಎಂದರು. ನಂತರ, ಹೇಗೆ ಅವರ ತಾಯಿ ಅವರನ್ನು ಕಲ್ಕತ್ತೆಯ ಪ್ರೌಢಶಾಲೆಗೆ ಕಳುಹಿಸಿದರು ಮತ್ತು ಅವರ ಹಳ್ಳಿಗೆ ಹಿಂತಿರುಗಲು ಹೇಗೆ ನಿರಾಕರಿಸಿದರು ಎಂಬುದನ್ನು ಹೇಳಿದರು. ''ಒಂದು ಮಧ್ಯಾಹ್ನ ನಮ್ಮ ತಾಯಿಯನ್ನು ನೋಡಲು ಹೋದೆ. ಅವಳಿಗೆ ನನ್ನ ಮೇಲೆ ಪ್ರೀತಿ ಇದ್ದರೂ ಅಸಹನೆಯಿಂದ, 'ನೀನೇಕೆ ಇಲ್ಲಿಗೆ ಬಂದೆ?' ಎಂದು ಆಕ್ಷೇಪಿಸಿದಳು.'' ಏಕೆ ಹೋದೆನೆಂದು ಅವರಿಗೆ ವಿವರಿಸಲಾಗಲಿಲ್ಲ. ಬಾಲಕ ತನ್ನ ತಾಯಿಯನ್ನು ಕಾಣಲು ಹೋದೆನೆಂದು ಹೇಗೆ ವಿವರಿಸಿಯಾನು? 'ಹಿಂತಿರುಗಿ ಹೋಗು. ಕಲ್ಕತ್ತೆಗೆ ಹಿಂತಿರುಗು. ಇಲ್ಲಿದ್ದರೆ ಹಳ್ಳಿಯವರ ನಡೆನುಡಿಯನ್ನು ಕಲಿತುಕೊಳ್ಳುವೆ' ಎಂದಳಂತೆ.

ವಿಚಿತ್ರವೆಂದರೆ, ಭಾರತ ಲಕ್ಷೋಪಲಕ್ಷ ಹಳ್ಳಿಗಳಿಂದ ಕೂಡಿದ್ದರೂ ಭಾರತೀಯ ನಾಗರಿಕತೆ ಪ್ರಾಚೀನ ಕಾಲದಿಂದಲೂ ನಗರ ಸಂಸ್ಕೃತಿಯನ್ನು ಎತ್ತಿ ಹಿಡಿದಿದೆ. ಎರಡು ಪದಗಳಿವೆ: ಒಂದು ಗ್ರಾಮ್ಯ, ಇನ್ನೊಂದು ನಾಗರಿಕ. 'ಗ್ರಾಮ್ಯ'ವೆಂದರೆ, ಹಳ್ಳಿಗೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಸೇರಿದುದು. ಅಸಭ್ಯ ಎಂಬ ಅರ್ಥವೂ ಆ ಪದಕ್ಕಿದೆ. 'ನಾಗರಿಕ' ಎಂದರೆ, ನಗರಕ್ಕೆ ಸೇರಿದುದು; ಸುಸಂಸ್ಕೃತ ಎಂಬ ಅರ್ಥವೂ ಇದೆ. ನಿಮ್ಮಲ್ಲಿಯೂ ಕೂಡ ಅದೇ ಅರ್ಥವಿದೆ. ಅಂತೂ, ಸ್ವಾಮಿಗಳು, ನಾನು ಸಣ್ಣ ಪಟ್ಟಣದಲ್ಲಿ ಕಾಲೇಜಿಗೆ ಹೋಗುವುದನ್ನು ಬಹಳ ವಿರೋಧಿಸಿದರು.

ನಂತರ ಅವರು, ಸ್ವಾಮಿ ವಿವೇಕಾನಂದರು ಯಾವ ವಿಷಯಗಳನ್ನು ವ್ಯಾಸಂಗ ಮಾಡುವುದಕ್ಕೆ ಇಷ್ಟಪಡುತ್ತಿದ್ದರು ಎಂಬುದನ್ನು ನನಗೆ ಹೇಳಿದರು. ಅವೇ ತತ್ತ್ವಶಾಸ್ತ್ರ ಮತ್ತು ಇತಿಹಾಸ. ಈ ವಿಷಯಗಳನ್ನು ಅಧ್ಯಯನ ಮಾಡುವಂತೆ ನನಗೆ ಹೇಳಿದರು. ನಾನು, ಭಾರತದಲ್ಲೇ ಅತ್ಯಂತ ಶ್ರೇಷ್ಠ ಕಾಲೇಜು ಎನಿಸಿದ ಪ್ರೆಸಿಡೆನ್ಸಿ ಕಾಲೇಜಿಗೆ ಹೋಗಬೇಕೆಂದು ಅವರು ಇಚ್ಛಿಸಿದರು. ಆದರೆ ಅದು ಅತ್ಯಂತ ದುಬಾರಿಯಾದ ಕಾಲೇಜೂ ಆಗಿದ್ದುದರಿಂದ ನನಗೆ ಅದು ನಿಲುಕದುದಾಗಿತ್ತು. ಆದ್ದರಿಂದ ನಾನು ಕಲ್ಕತ್ತೆಯಲ್ಲಿದ್ದ ಮತ್ತೊಂದು ಕಾಲೇಜು, ಸಿಟಿ ಕಾಲೇಜಿಗೆ ಹೋದೆ. ಸ್ವಲ್ಪ ಕಾಲದ ನಂತರ, ನನಗೆ ಸರ್ಕಾರದ ವಿದ್ಯಾರ್ಥಿವೇತನ ಸಿಕ್ಕಿರುವುದಾಗಿ ತಿಳಿದುಬಂದಿತು. ಸ್ವಲ್ಪ ಧೈರ್ಯ ಮಾಡಿದ್ದರೆ ಅಥವಾ ಸ್ವಾಮಿಗಳು ಹೇಳಿದಂತೆ ಮಾಡಿದ್ದರೆ, ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೇ ವ್ಯಾಸಂಗ ಮಾಡಬಹುದಾಗಿತ್ತು. ನನ್ನ ಬುದ್ಧಿವಂತಿಕೆಯಿಂದಾಗಿ, ಸ್ವಾಮಿಗಳ ಸಲಹೆಯನ್ನು ಅನುಸರಿಸುವುದರಲ್ಲಿ ವಿಫಲನಾದೆ. ಅವರು ಹೇಳಿದಂತೆ ನಾನು ವ್ಯಾಸಂಗ ಮಾಡಲೂ ಇಲ್ಲ. ಪ್ರೌಢಶಾಲೆಯಲ್ಲಿ ಓದುವಾಗಲೇ ನನ್ನ ಮನಸ್ಸು ಆಧ್ಯಾತ್ಮಿಕ ಚಿಂತನೆಗಳ ಕಡೆ ತಿರುಗಿದ್ದರಿಂದ, ಶಾಲಾ ವ್ಯಾಸಂಗದಲ್ಲಿ ನನ್ನ ಆಸಕ್ತಿ ಇಂಗಿಹೋಯಿತು. ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಎರಡು ವರ್ಷ ವ್ಯಾಸಂಗದಲ್ಲಿ ಉದಾಸೀನವಾದರೆ, ಮುಂದಿನ ಎರಡು ವರ್ಷ ಅದನ್ನು ಇನ್ನಷ್ಟು ಕಡೆಗಣಿಸಿದೆ.

ಅದೇನೇ ಆದರೂ, ಕೊನೆಯ ಎರಡು ವರ್ಷಗಳಲ್ಲಿ ಕಾಲೇಜಿಗಂತೂ ಹೋಗುತ್ತಿದ್ದೆ. ಆ ಕಾಲದಲ್ಲಿ ಸ್ವಾಮಿ ಪ್ರೇಮಾನಂದರನ್ನು

ನೋಡಲು ಬೇಲೂರು ಮಠಕ್ಕೆ ಹೋಗುತ್ತಿದ್ದೆ. ಆ ಸಮಯದಲ್ಲಿ ಕೆಲವು ಆಧ್ಯಾತ್ಮಿಕ ಸಾಧನೆಗಳ ಫಲವಾಗಿ ತಡೆಯಲಾರದಷ್ಟು ತಲೆನೋವು ಬರುತ್ತಿತ್ತು. ಅದು ಎಡೆಬಿಡದೆ ಸುಮಾರು ಮೂರು ವರ್ಷಗಳ ಕಾಲ ಇತ್ತು. ಆ ಕಾಲದಲ್ಲಿ ಧ್ಯಾನ, ಅಧ್ಯಯನ ಅಥವಾ ಮತ್ತಾವುದನ್ನೂ ಮಾಡಲು ಆಗುತ್ತಿರಲಿಲ್ಲ. ನನ್ನ ಜೀವನವೇ ಬರಿದಾದಂತೆ ಕಾಣುತ್ತಿತ್ತು. ಆ ಕರಾಳ ದಿನಗಳಲ್ಲಿ ಸ್ವಾಮಿ ಪ್ರೇಮಾನಂದರು ನನಗೆ ಭರವಸೆ ಕೊಡುತ್ತಿದ್ದರು. ಎಲ್ಲ ಸರಿ ಹೋಗುವುದು ಎಂದು ಅವರು ಹೇಳುತ್ತಿದ್ದರು. ಆ ಮಾತುಗಳನ್ನು ನಂಬುವುದು ನನಗೆ ಸಾಧ್ಯವಾಗುತ್ತಿರಲಿಲ್ಲ. ಅವರು ನನ್ನನ್ನು ಕೇವಲ ಪ್ರೋತ್ಸಾಹಿಸುತ್ತಿರುವರು ಎನ್ನಿಸುತ್ತಿತ್ತು. ಆದರೆ ಎಲ್ಲವೂ ಸರಿ ಹೋಯಿತು. ಅಂತಹ ಮಹಾತ್ಮರು ಏನನ್ನಾದರೂ ಹೇಳಿದರೆ ಅದು ಸತ್ಯವಾಗಲೇಬೇಕು.

ಆ ಸಮಯದಲ್ಲಿ ನಾನು ಅವರಿಗೆ ಪತ್ರ ಬರೆಯಬೇಕಾಗಿ ಬಂತು. ನನಗೆ ಆಗಿದ್ದ ಆಧ್ಯಾತ್ಮಿಕ ಅನುಭವದ ಸತ್ಯತೆಯ ಬಗ್ಗೆ ಅವರನ್ನು ಕೇಳಬೇಕಾಗಿತ್ತು. ನನಗೆ ನೇರ ಹೇಳಲು ಸಂಕೋಚವಾದುದರಿಂದ ನನ್ನ ಪ್ರಶ್ನೆಯನ್ನು ಸ್ಪಷ್ಟವಾಗಿ ಬರೆದು ತಿಳಿಸಬೇಕಾಯಿತು. ಅವರು ಒಂದು ದೀರ್ಘ ಪತ್ರದ ಮೂಲಕ ವಿವರಿಸಿದರು. ದುರದೃಷ್ಟವಶಾತ್ ಆ ಪತ್ರ ಈಗ ನನ್ನ ಬಳಿ ಇಲ್ಲ. ಆ ವೇಳೆಗೆ ನನ್ನ ವೈರಾಗ್ಯ ಸ್ಥಿರವಾಗಿತ್ತು; ನನ್ನಲ್ಲಿದ್ದುದನ್ನೆಲ್ಲಾ, ಸ್ವಾಮಿ ಪ್ರೇಮಾನಂದರು ನನಗೆ ಬರೆದಿದ್ದ ಪತ್ರಗಳನ್ನೂ ಕೂಡ – ಬಿಸಾಡುವಷ್ಟು ಮೂರ್ಖನಾಗಿದ್ದೆ. ಈಗ ನಾನು ಅದಕ್ಕಾಗಿ ಪಶ್ಚಾತ್ತಾಪಪಡುತ್ತೇನೆ. ಆದರೆ ಈ ಒಂದು ಪತ್ರದ ಬಗ್ಗೆ ನನಗೆ ನೆನಪಿದೆ. ಅವರು ನನ್ನ ಅನುಭವ ನಿಜವೆಂದು ಖಾತ್ರಿಪಡಿಸಿ ನನ್ನ ಪ್ರಶ್ನೆಗೆ ಉತ್ತರವಿತ್ತಿದ್ದರು. ಅನೇಕ ರೀತಿಯಿಂದ ನನ್ನ ಅನುಭವವನ್ನು ದೃಢಪಡಿಸಿದ್ದರು. 'ನೀನು ಸ್ವಾಮೀಜಿಯವರ ಕಾರ್ಯವನ್ನು ಮಾಡಲು ಜನ್ಮವೆತ್ತಿರುವೆ' ಎಂದು ತಿಳಿಸಿದ್ದರು. ಅದನ್ನು ಅಕ್ಷರಶಃ ಒಪ್ಪಲು ಆ ಸಮಯದಲ್ಲಿ ನಾನು ಸಿದ್ಧನಿರಲಿಲ್ಲ, ಆ ಮಾತುಗಳೂ ಕೂಡ ಉತ್ತೇಜನಕ್ಕಾಗಿ ಹೇಳಿದವೆಂದು ನಾನು ಭಾವಿಸಿದೆ. ಆದರೆ ಹೌದು, ಈಗ ನನ್ನ ಜೀವಿತದ ಉದ್ದೇಶ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಕೆಲಸವನ್ನು ಮಾಡುವುದಾಗಿದೆ. ಅವರು ಏನನ್ನು ಹೇಳಿದರೋ ಅದು ಸತ್ಯವಾಯಿತು; ನನ್ನ ಊಹೆಗೂ ಮೀರಿ ಅವರು ನನ್ನ ಭವಿಷ್ಯವನ್ನು ಕಂಡಿದ್ದರು.

ಅವರು ಯಾವಾಗಲೂ ನನ್ನ ಸಹಾಯಕ್ಕೆ ನಿಲ್ಲುತ್ತಿದ್ದರು. ನನಗೆ ಭರವಸೆ ಬೇಕಾದಾಗ ಭರವಸೆ ನೀಡುತ್ತಿದ್ದರು. ಕಲ್ಕತ್ತೆಯಲ್ಲಿ ಕಾಲೇಜಿಗೆ ಹೋಗುವುದಕ್ಕೆ ಸ್ವಲ್ಪ ಕಾಲಕ್ಕೆ ಮುನ್ನ ನಾನು ಅವರನ್ನು ಭೇಟಿಯಾಗಿದ್ದಾಗ ನನ್ನ ಆಧ್ಯಾತ್ಮಿಕ ಜೀವನದ ಭವಿಷ್ಯದ ಬಗ್ಗೆ ಇದ್ದ ಸಮಸ್ಯೆಯೊಂದನ್ನು ಬಗೆಹರಿಸಿದರು. ಆ ಸಮಸ್ಯೆಯಿಂದ ನನಗೆ ಬಹಳ ತೊಂದರೆಯಾಗಿತ್ತು. ನಾನು ಅವರಿಗೆ ಎಷ್ಟು ಋಣಿಯಾಗಿರುವೆನೆಂಬುದರ ಬಗ್ಗೆ ನಿಮಗೆ ತಿಳಿಸಲೋಸುಗ ಆ ಸಂದರ್ಭವನ್ನು ನಿಮಗೆ ವಿವರಿಸುತ್ತೇನೆ. ಅವರನ್ನು ನೋಡಲು ಬೇಲೂರು ಮಠಕ್ಕೆ ಹೋದೆ. ಆದರೆ ಅವರು ಅಲ್ಲಿ ಕಾಣಲಿಲ್ಲ. ಅವರಿಗಾಗಿ ಕಾಯುವಂತೆ ನನಗೆ ಒಂದು ಸಂದೇಶವನ್ನು ಬಿಟ್ಟು ಹೋಗಿದ್ದರು. ಮಳೆಗಾಲ ಪ್ರಾರಂಭವಾಗಿತ್ತು; ನನಗೆ ಜ್ವರ ಬರಲಾರಂಭಿಸಿತ್ತು. ಮಠದ ಸಂನ್ಯಾಸಿಗಳಿಗೆ ತೊಂದರೆಯಾಗಬಾರದೆಂದು ನಾನು ನಮ್ಮ ಊರಿಗೆ ಹಿಂತಿರುಗಿದೆ. ಎರಡು ಮೂರು ವಾರಗಳ ನಂತರ ಕಲ್ಕತ್ತೆಗೆ ಹಿಂತಿರುಗಿದೆ. ಪ್ರಯಾಣ ದೀರ್ಘವಾಗಿತ್ತು – ರೈಲು, ನಂತರ ದೋಣಿ, ಮತ್ತೆ ರೈಲು. ಪ್ರವಾಹದಿಂದ ಪ್ರಯಾಣ ತಡವಾಯಿತು. ಜತೆಗೆ ಈ ಭಯಂಕರ ತಲೆನೋವು. ಮಾರ್ಗಮಧ್ಯೆ, ಮಧ್ಯರಾತ್ರಿಯಲ್ಲಿ ಆ ತಲೆನೋವಿನಲ್ಲಿಯೇ ನಾನು ಅವರಿಗೆ, 'ಈಗ ಇದು ನನ್ನ ಸಮಸ್ಯೆ; ನೀವು ಇದಕ್ಕೆ ಏನಾದರೂ ಪರಿಹಾರ ನೀಡಿ' ಎಂದು ಪ್ರಾರ್ಥಿಸಿದೆ. ನಾನು ಕಲ್ಕತ್ತೆ ತಲುಪಿದ ಮೇಲೆ ನನಗೆ ತಿಳಿಯಿತು, ಅವರಿಗೆ ಕಾಲರಾ ಬಂದು ಆಗತಾನೆ ಚೇತರಿಸಿಕೊಳ್ಳುತ್ತಿದ್ದರು ಎಂದು. ಆಗತಾನೆ ಅವರಿಗೆ ಅನಾನಸು ಹಣ್ಣು ತಿನ್ನಬೇಕೆನಿಸಿತ್ತು ಎಂದು ನನ್ನ ಮಿತ್ರರು ತಿಳಿಸಿದರು. ಕಾಕತಾಳೀಯವೆಂಬಂತೆ, ನಾನು ಮನೆಯಿಂದ ಹೊರಟ ದಿನ ನಮ್ಮ ಮನೆಯ ತೋಟದ ಗಿಡವೊಂದರಲ್ಲಿ ಎರಡು ಮಾಗಿದ ದೊಡ್ಡ ಅನಾನಸು ಹಣ್ಣುಗಳಿದ್ದವು. ಆಶ್ಚರ್ಯವೆಂದರೆ, ಹಕ್ಕಿಗಳು ಅವನ್ನು ಮುಟ್ಟಿರಲಿಲ್ಲ. ನಾನು ಈ ಹಣ್ಣುಗಳನ್ನು ಶ್ರೀರಾಮಕೃಷ್ಣರಿಗೆ ನಿವೇದಿಸಲು ಬೇಲೂರು ಮಠಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಯೋಚಿಸಿದ್ದೆ. ನಮ್ಮ ಮನೆಯವರಿಗೆ ಇಚ್ಛೆಯಿಲ್ಲದಿದ್ದರೂ ನಾನು ಅವನ್ನು ಕಿತ್ತುಕೊಂಡು ಬಂದಿದ್ದೆ. ಕಲ್ಕತ್ತೆ ತಲುಪಿದ ಬೆಳಗ್ಗೆ ಮಠಕ್ಕೆ ಹೋದೆ. ಸ್ವಾಮಿ ಪ್ರೇಮಾನಂದರು ಮೇಲೆ ವರಾಂಡದಲ್ಲಿದ್ದರು. ಒಂದು ದೊಡ್ಡ ಬೆಂಚಿನ ಮೇಲೆ ಕುಳಿತಿದ್ದರು. ಅವರು ನನಗೆ ಕಾಯುತ್ತಿದ್ದಂತೆ ಕಂಡುಬಂತು. ನನ್ನನ್ನು ನೋಡಿದ ಕೂಡಲೆ ಅವರು ಜೋರಾಗಿ ಏನನ್ನೋ ಹೇಳಿದರು. ಆದರೆ ನಾನು ನಿಲ್ಲುವಂತಿರಲಿಲ್ಲ. ಆ ಅನಾನಸ್ ಹಣ್ಣುಗಳನ್ನು ನೈವೇದ್ಯಕ್ಕಾಗಿ ತಂದಿದ್ದುದರಿಂದ ಅವನ್ನು ಎಲ್ಲಿಯೂ ಇಡುವಂತಿರಲಿಲ್ಲ, ಆದ್ದರಿಂದ ನೈವೇದ್ಯವನ್ನು ತಯಾರಿಸುವ ಕೋಣೆಗೆ ಸರಸರನೆ ಹೋಗಿ, ಕೂಡಲೆ ಹಿಂತಿರುಗಿ ಬಂದೆ.

ಅವರು ಭಾವಾವಸ್ಥೆಯಲ್ಲಿದ್ದರು. ನಾನು ಹಿಂದೆ ವಿವರಿಸಿದಂತೆ ಅವರ ಮುಖ ಬೆಂಕಿಯಂತೆ ಕೆಂಪಾಗಿತ್ತು, ಕಣ್ಣಿನ ರೆಪ್ಪೆಗಳು ಬಡಿಯುತ್ತಿದ್ದುವು. ನಾನು ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದೆ. ತಕ್ಷಣ ಏನೋ ನನ್ನನ್ನು ಪ್ರವೇಶಿಸಿದಂತಾಯಿತು. ನಾನು ಮಾತನಾಡುವುದಕ್ಕೆ ಮೊದಲೇ ಅವರು ಒಂದು ಪುಟ್ಟ ವಾಕ್ಯವನ್ನು ಹೇಳಿದರು. ಅದು ನನ್ನ ಸಮಸ್ಯೆಯನ್ನು ಒಮ್ಮೆಗೆ ಪರಿಹರಿಸಿತು. ತಾಪದಿಂದ ಬೆಂದ ಹಾಗಿದ್ದ ನನ್ನ ಮೇಲೆ ಅವರು ಒಂದು ತೊಟ್ಟಿ ನೀರನ್ನು ಸುರಿದಂತಿತ್ತು. ನನ್ನ ದೇಹ, ಮನಸ್ಸು ಎಲ್ಲವೂ ತಣ್ಣಗಾಯಿತು. ಅವರ ಮಹತ್ಕೃಪೆ ಹಾಗಿತ್ತು. ನನ್ನ ಸಮಸ್ಯೆ, ಸಮಸ್ಯೆಯೇ ಅಲ್ಲವೆಂದೂ, ನಾನು ಅದನ್ನು ಹಿಗ್ಗಿಸಿ ಸಮಸ್ಯೆಯಂತೆ ಕಾಣುತ್ತಿರುವೆನೆಂದೂ ಅವರು ವಿವರಿಸಿದರು. ಕೇವಲ ಐದು ಪದಗಳಿಂದ ಕೂಡಿದ ಅವರ ಮೊದಲ ವಾಕ್ಯ ಸಾಕಾಗಿತ್ತು. ಆಧ್ಯಾತ್ಮಿಕ ತೃಷೆಯನ್ನು ಒಬ್ಬರು

ಮತ್ತೊಬ್ಬರಲ್ಲಿ ನಿಜವಾಗಿಯೂ ದಾಟಿಸಬಹುದೆಂದು ನನ್ನ ಅನುಭವದಿಂದಲೇ ಅಂದು ನಾನು ತಿಳಿದೆ. ನಾನು ಅವರ ಪಾದ ಗಳನ್ನು ಮುಟ್ಟಿದಾಗ, ನಿಸ್ಸಂದೇಹವಾಗಿ ಅವರಿಂದ ಏನನ್ನೋ ಪಡೆದೆ, ಮತ್ತು ಮೂರು ದಿನಗಳ ಕಾಲ ಭಾವಭರಿತ ಸ್ಥಿತಿಯಲ್ಲಿ ಇದ್ದೆ. ದೇವರ ಬಗ್ಗೆ ಮಾತನಾಡುವುದು ಮತ್ತು ಹಾಡುವುದು, ಇಷ್ಟನ್ನೇ ಮಾಡಬೇಕೆನಿಸುತ್ತಿತ್ತು. ಅದೊಂದು ಅದ್ಭುತ ಸ್ಥಿತಿ. ಆದರೆ ಮೂರು ದಿನಗಳ ನಂತರ, ಮೊಸರನ್ನು ಕೊಂಡುಕೊಳ್ಳಲು ಅಂಗಡಿಗೆ ಹೋದೆ. ಕಲ್ಕತ್ತೆ ಸಿಹಿಮೊಸರಿಗೆ ಪ್ರಸಿದ್ಧಿ. ಅದನ್ನು ಸ್ವಲ್ಪ ಕೊಂಡು ಕೊಂಡು ತಿಂದೆ. ಆಗ ನನ್ನ ಮನಸ್ಸು ಕೂಡಲೆ ಕೆಳಗೆ ಬಂದಿತು. ಅದೂ ಕೂಡ ಒಂದು ಅನುಭವ. ಅವರಿವರು ಕೊಟ್ಟ ಆಹಾರವನ್ನು ಸೇವಿಸಬಾರದೆಂದು ಹಿಂದೂಗಳಲ್ಲಿ ನಂಬಿಕೆಯಿದೆ (ಖಂಡಿತ ನೀವು ಇದನ್ನು ಕುರುಡು ನಂಬಿಕೆಯೆಂದೇ ಹೇಳುವಿರಿ). ಅದರಲ್ಲಿ ಸತ್ಯಾಂಶವಿದೆ, ಕಡೇಪಕ್ಷ ಆಧ್ಯಾತ್ಮಿಕ ಬೆಳವಣಿಗೆಯ ವಿಷಯದಲ್ಲಿ. ಆಧ್ಯಾತ್ಮಿಕ ಭಾವಗಳು ನಾಟಬೇಕಾದರೆ, ನಮ್ಮ ಮನಸ್ಸೆಂಬ ಸಾಧನ ಅತ್ಯಂತ ಸೂಕ್ಷ್ಮವಾಗಿರಬೇಕು. ಶುದ್ಧಮನಸ್ಕರಲ್ಲದ ವ್ಯಕ್ತಿಗಳಿಂದ ಬಂದ ಆಹಾರವನ್ನು ತಿಂದರೆ, ಮನಸ್ಸಿನ ಸೂಕ್ಷ್ಮತೆ ನಾಶವಾಗು ವುದು, ಮತ್ತೆ ಅವನ್ನು ನಾವು ಅನುಭವಿಸಲಾರೆವು. ನಾನು ನಿಮಗೆ ಕೆಲವೊಮ್ಮೆ ಹೇಳಿದ್ದೇನೆ, ನೀವು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದು ವರಿಯಬೇಕಾದರೆ, ಅಲ್ಲಿ ಇಲ್ಲಿ ತಿನ್ನಬಾರದು. ಯಾರು ನಿಮ್ಮ ಆಹಾರವನ್ನು ತಯಾರಿಸುವವರೆಂಬ ವಿಷಯದಲ್ಲಿ ನೀವು ಎಚ್ಚರ ದಿಂದಿರಬೇಕು. ಇದರ ಬಗ್ಗೆ ಮನಸ್ಸನ್ನು ಗೋಜಲು ಮಾಡಿಕೊಳ್ಳ ಬೇಡಿ, ಇಲ್ಲಿ ಇತರರಿಗಿಂತ ನೀವು ಪವಿತ್ರರೆಂದು ಭಾವಿಸುವ ಸಂಭವವೂ ಇದೆ. ಆದರೆ ಸತ್ಯ ಅದಲ್ಲ, ನಿಮ್ಮ ಕೈಯಿಂದ ಆಹಾರ ವನ್ನು ಸ್ವೀಕರಿಸದವರು ಇರುವರೆಂಬುದನ್ನು ನೆನಪಿಡಿ; ಅದು ನಿಮ್ಮ ಅಹಂಕಾರವನ್ನು ತಗ್ಗಿಸುವುದು.

ನಾನು ಹಿಂದೆ ಹೇಳಿದಂತೆ, ಕಲ್ಕತ್ತೆಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾಮಿ ಪ್ರೇಮಾನಂದರನ್ನು ಅನೇಕ ಬಾರಿ ಭೇಟಿ ಮಾಡಿದೆ. ಅವರು ಯಾವಾಗಲೂ ನನಗೆ ಪ್ರೋತ್ಸಾಹ ನೀಡುತ್ತಿದ್ದರು. ಅತ್ಯಂತ ದುಃಖಕರವಾದ ಸಂಗತಿಯೆಂದರೆ, ನಾನು ಸಂಘವನ್ನು ಸೇರುವುದಕ್ಕೆ ಮೊದಲೇ ಅವರು ಕಾಲವಾದರು. ನಾನು ವಿಶ್ವವಿದ್ಯಾ ನಿಲಯದಿಂದ ಪದವಿಯನ್ನು ಪಡೆದಾಗ ಅವರು ಬೇಲೂರು ಮಠವನ್ನು ಬಿಟ್ಟಿದ್ದರು. ಆದರೆ ಆಗ ನನಗೆ ಆ ವಿಷಯ ಗೊತ್ತಿರ ಲಿಲ್ಲ, ನಾನು ಮುಂದೇನು ಮಾಡಲಿ ಎಂದು ಅವರಿಗೆ ಪತ್ರ ಬರೆದೆ. ಅವರು ಪ್ರವಾಸ ಮಾಡುತ್ತಿರುವುದಾಗಿಯೂ ಯಾವಾಗ ಹಿಂತಿರು ಗುವರೋ ತಿಳಿಯದೆಂದೂ, ಆ ಸಮಯದಲ್ಲಿ ಬೇಲೂರು ಮಠ ದಲ್ಲಿದ್ದ ಸ್ವಾಮಿ ತುರೀಯಾನಂದರೊಡನೆ ನಾನು ಮಾತನಾಡ ಬೇಕೆಂದೂ ಪ್ರೇಮಾನಂದರು ನನಗೆ ಪತ್ರದ ಮೂಲಕ ತಿಳಿಸಿದರು. ನನ್ನನ್ನು ಬಲ್ಲವರಾಗಿದ್ದ ಮತ್ತು ನನ್ನ ಆಧ್ಯಾತ್ಮಿಕ ಹಿನ್ನೆಲೆಯನ್ನು ತಿಳಿದಿದ್ದ ಸ್ವಾಮಿ ಪ್ರೇಮಾನಂದರ ಬುದ್ಧಿವಾದ ಮಾತ್ರವೇ ನನಗೆ ಬೇಕಾಗಿತ್ತು. ಆದರೆ ಅವರೊಡನೆ ಮಾತನಾಡುವ ಅವಕಾಶ ಮುಂದೆ ನನಗೆ ದೊರೆಯಲೇ ಇಲ್ಲ. ಏಕೆಂದರೆ, ಸ್ವಲ್ಪ ಕಾಲದ ನಂತರ ಅವರು ಕಾಲವಾದರು.

ಇದುವರೆಗಿನ ವಿವರಣೆಯಿಂದ, ನಾನು ಅವರಿಗೆ ವಿಶೇಷವಾಗಿ ಋಣಿಯಾಗಿರುವುದಾಗಿ ಏಕೆ ಭಾವಿಸುತ್ತೇನೆಂದು ನಿಮಗೆ ಅರ್ಥ ವಾಗಿರಬಹುದು. ನಾನು ಅವರಿಂದ ಪಡೆದ ಕೃಪಾಶೀರ್ವಾದ ಗಳಲ್ಲದೆ ನನ್ನ ಭವಿತವ್ಯವನ್ನೂ ಅವರು ರೂಪಿಸಿದರು.ಅವ ರೊಂದಿಗೆ ನಿಕಟ ಸಂಬಂಧವನ್ನು ಪಡೆಯಲು ಮತ್ತು ಅವರಂತಹ ಪರಿಪೂರ್ಣ ಚೇತನವನ್ನು ತಿಳಿಯಲು ನನಗವರು ಅವಕಾಶ ಕೊಟ್ಟರು. ಅದಕ್ಕಾಗಿ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ. ಆಧ್ಯಾತ್ಮಿಕ ವ್ಯಕ್ತಿಗಳ ಸಂಪರ್ಕವನ್ನು ಪಡೆಯುವುದು, ಅದರ ಲ್ಲಿಯೂ ಜ್ಞಾನಪ್ರಕಾಶವುಳ್ಳವರ ಒಡನಾಟಕ್ಕಿಂತ ಹೆಚ್ಚು ಪ್ರೇರಕ ವಾದುದು, ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ಮತ್ತೊಂದಿಲ್ಲ. ಯಾರ ಜೀವನ ಮತ್ತು ಚೇತನ, ಆಧ್ಯಾತ್ಮಿಕ ಸತ್ಯ ಅಥವಾ ಆಧ್ಯಾತ್ಮಿಕತೆಯ ನಿಜಸ್ವರೂಪದ ಅಚ್ಚಿನಲ್ಲಿ ರೂಪಿತವಾಗಿರುವುದೋ, ಅಂಥವರ ಸಂಗ ದೊರೆತಲ್ಲದೆ ನಮಗೆ ಆಧ್ಯಾತ್ಮಿಕತೆಯ ಸ್ವರೂಪ ಅರ್ಥ ವಾಗುವುದಿಲ್ಲ. ದೇವರ ಹೊರತು ಮತ್ತೇನೂ ಇರದವರು ಅನೇಕರಿದ್ದಾರೆ. ಅವರಿಗೆ ದೇಹವಿರುವಂತೆ ಕಾಣುತ್ತದೆ, ಆದರೆ ಅವರ ದೇಹವೇ ಭಗವಂತನ ಚೈತನ್ಯದಿಂದ ತುಂಬಿರುವುದು. ಇದು ಉತ್ಪ್ರೇಕ್ಷೆಯಂತೆ ಕಾಣಬಹುದು, ಆದರೆ ವಸ್ತುಸ್ಥಿತಿ ಹಾಗಲ್ಲ. ಶ್ರೀರಾಮಕೃಷ್ಣರ ಶಿಷ್ಯರಲ್ಲಿ ನಾವು ಕಂಡ ಹಿರಿಮೆಯನ್ನು ಪದಗಳು ವಿವರಿಸಲಾರವು. ನೀವು ಅಂಥವರನ್ನು ನೋಡಿದಲ್ಲದೆ ಧರ್ಮದಲ್ಲಿ ವಿವರಿಸಿರುವ ವಿಷಯಗಳನ್ನು ಅರ್ಥಮಾಡಿಕೊಳ್ಳಲಾರಿರಿ. ದೇವ ರನ್ನು ನೀವು ಅಂತಃಕರಣಪೂರ್ವಕವಾಗಿ ಪ್ರೀತಿಸಬೇಕೆಂದು ಹೇಳು ತ್ತಾರೆ. ಆದರೆ ಅದರ ಅರ್ಥ ನಿಮಗೆ ಹೇಗೆ ತಿಳಿಯುವುದು? ನೀವು ಕಲಿಯ ಬೇಕಾದುದು ಏನು ಎಂಬುದು ನಿಮಗೆ ಗೊತ್ತಾದ ಹೊರತು ನೀವು ಅದನ್ನು ಹೇಗೆ ಕಲಿಯುವಿರಿ? ದೇವರಲ್ಲದೆ ಮತ್ತೇನೂ ಬೇಡವಾದಂಥ ವ್ಯಕ್ತಿಗಳಲ್ಲಿ ನೀವು ಅದನ್ನು ನೋಡಬಹುದು. ಆಧ್ಯಾತ್ಮಿಕ ಜೀವನದ ವೈಭವ ಅವರ ಜೀವನದಲ್ಲಿ ಒಡೆದು ಮೂಡಿರುತ್ತದೆ. ನಾನು ಕಂಡ ಎಲ್ಲ ಮಹಾಚೇತನಗಳನ್ನು ಕುರಿತು ಚಿಂತಿಸಿದಾಗ ಈ ವೈಭವವು ಎದ್ದು ಕಾಣುವಂತೆ ಅತ್ಯಂತ ಚೆನ್ನಾಗಿ ವ್ಯಕ್ತವಾಗಿರುವುದು ಸ್ವಾಮಿ ಪ್ರೇಮಾನಂದರ ಜೀವನದಲ್ಲಿ. ಅವರ ಜೀವನ ಸಂಪೂರ್ಣ ಅಹಂಕಾರಶೂನ್ಯವಾದುದು, ಆದರೂ ಅದೊಂದು ತೇಜೋಮಯ, ಶಕ್ತಿಪೂರ್ಣ ಜೀವನ.

ಪ್ರಾರಂಭದಲ್ಲಿ ಹೇಳಿದಂತೆ ನಾನು ವಿಶೇಷವಾಗಿ ಅವರಿಗೆ ಋಣಿಯಾಗಿದ್ದೇನೆ. ಆದರೂ ಈ ಮಾತು ಪವಿತ್ರತೆಗೆ ಭಂಗ ತರುವಂತಿದೆ. ಅವರೊಡನೆ ನನ್ನ ಸಂಬಂಧ ನಿರಂತರವಾದುದು. ಯಾವುದು ಅನಂತವೋ ಅದನ್ನು ಕೃತಜ್ಞತೆ ಅಥವಾ ದಾಕ್ಷಿಣ್ಯ ಎಂಬ ಮಾತುಗಳಿಂದ ವಿವರಿಸಲಾಗದು. ಸಾಮಾನ್ಯವಾದ ಸಂಬಂಧದಲ್ಲಿ

ಕೂಡ, ಕೃತಜ್ಞತೆ ಮುಂತಾದ ಮಾತುಗಳು ವ್ಯಕ್ತಿಗಳ ಮಧ್ಯೆ ಅಂತರವಿರುವುದನ್ನು ಸೂಚಿಸುತ್ತವೆ. ಧನ್ಯವಾದ ಎಂದು ಹೇಳಿದರೆ, ಆ ಸಂಬಂಧದ ಮೂಲಕ ಪಡೆದುದಕ್ಕೆ ಬೆಲೆ ಕೊಟ್ಟಂತಾಯಿತು ಎಂದು ನೀವು ಭಾವಿಸುತ್ತೀರಿ. ಹಾಗಲ್ಲ, ಯಾರು ಸ್ವಾಮಿ ಪ್ರೇಮಾನಂದರನ್ನು ಬಲ್ಲರೊ, ಅವರಿಂದ ಆಶೀರ್ವಾದವನ್ನು ಪಡೆದರೊ ಅವರು ಎಂದಿಗೂ ಅವರನ್ನು ಈ ರೀತಿ ನೋಡಲಾರರು. ಇರಲಿ, ಅವರ ಜೀವನದ ಕಥೆಯನ್ನು ನಾನೀಗ ಮುಗಿಸುತ್ತೇನೆ.

-೬-

ನಾನು ಹಿಂದೆ ನಿಮಗೆ ಹೇಳಿದಂತೆ, ಸ್ವಾಮಿ ಪ್ರೇಮಾನಂದರು ೧೯೧೬ರಲ್ಲಿ ಬೇಲೂರು ಮಠವನ್ನು ಬಿಟ್ಟು ಕಲ್ಕತ್ತೆಯಲ್ಲಿದ್ದ ಬಲರಾಮ ಬೋಸರ ಮನೆಗೆ ಹೋದರು. ಬೇಲೂರು ಮಠದ ಮೇಲ್ವಿಚಾರಣೆಯನ್ನು ಅವರು ನೋಡಿಕೊಳ್ಳಬೇಕಾಗಿರಲಿಲ್ಲ; ಆದ್ದರಿಂದ ಹಲವೆಡೆ ಪ್ರವಚನ ಮಾಡಲು ಅವರಿಗೆ ಬೇಕಾದಷ್ಟು ಅವಕಾಶವಿತ್ತು. ಅವರ ಜೀವಿತದ ಕೊನೆಯ ವರ್ಷಗಳಲ್ಲಿ ಅವರು ಮುಖ್ಯವಾಗಿ ಪೂರ್ವ ಬಂಗಾಲಕ್ಕೆ ಹೋದರು. ಸ್ವಾಮಿ ವಿವೇಕಾನಂದರು ಅಲ್ಲಿಗೆ ಒಮ್ಮೆ ಮಾತ್ರ ಹೋಗಿದ್ದರು. ಅವರು ೧೯೦೧ರಲ್ಲಿ ಢಾಕಾದಲ್ಲಿ ಉಪನ್ಯಾಸ ಮಾಡಿ ಹಿಂತಿರುಗಿದ ಮೇಲೆ ಸ್ವಾಮಿ ಪ್ರೇಮಾನಂದರಿಗೆ, ''ಪೂರ್ವ ಬಂಗಾಲವನ್ನು ನಾನು ನಿನಗೆ ಬಿಟ್ಟಿದ್ದೇನೆ'' ಎಂದಿದ್ದರು. ಅದು ಪ್ರವಾದಿಯ ಮಾತು. ಸ್ವಾಮಿ ಪ್ರೇಮಾನಂದರು ಅಲ್ಲಿಗೆ ಅನೇಕ ವೇಳೆ ಹೋದರು. ಕೆಲವು ವೇಳೆ ಸ್ವಾಮಿ ಬ್ರಹ್ಮಾನಂದರ ಜೊತೆಗೆ, ಕೆಲವು ವೇಳೆ ಅವರೊಬ್ಬರೇ. ಅವರು ಅಲ್ಲಿ ಅಸಾಧಾರಣವಾಗಿ ಯಶಸ್ವಿಯಾಗಿದ್ದರು. ಅವರ ಭೇಟಿಗಳು ಪ್ರಸಿದ್ಧವಾದ ಸಂಗತಿಗಳು.

ಅವರು ಎಲ್ಲಿಗೆ ಹೋದರೂ ಸಾವಿರಾರು ಜನರು ಅವರತ್ತ ಆಕರ್ಷಿತರಾಗುತ್ತಿದ್ದರು: ವಯಸ್ಸಾದವರು, ಯುವಕರು, ಹಿಂದೂಗಳು, ಮುಸಲ್ಮಾನರು, ಆಸ್ತಿಕರು, ನಾಸ್ತಿಕರು – ಎಲ್ಲರೂ ಅವರೆಡೆಗೆ ಸೆಳೆಯಲ್ಪಡುತ್ತಿದ್ದರು. ಅವರು ಒಂದು ಸ್ಥಳದಿಂದ ಹೊರಡುವಾಗ, ಕೆಲವು ದಿನಗಳ ಕಾಲ ಮಾತ್ರ ಅವರು ಅಲ್ಲಿದ್ದರೂ, ಜನರು ದುಃಖದಿಂದ ಗೋಳಿಡುತ್ತಾ ಅವರ ಹಿಂದೆ ಓಡುತ್ತಿದ್ದರು. ಅವರು ಕುದುರೆ ಗಾಡಿಯಲ್ಲಿ ಹೋಗುತ್ತಿರುವಾಗಲೂ ಜನರು ಅವರ ಹಿಂದೆ ಓಡುತ್ತಾ ಕಾತರತೆಯಿಂದ ಹಿಂಬಾಲಿಸುತ್ತಿದ್ದರು. ಅನೇಕ ಮೈಲಿಗಳವರೆಗೆ ಹಾಗೆ ಓಡುತ್ತ, ಯಾರಾದರೂ ಸಮೀಪದವರು ಕಾಲವಾದರೆ ಅಳುವವರ ಹಾಗೆ ಕಣ್ಣೀರು ಕರೆಯುತ್ತ ಅವರ ಹಿಂದೆ ಹೋಗುತ್ತಿದ್ದರು. ಇವು ಚೈತನ್ಯದ ನಿಜವಾದ ಪವಾಡಗಳು. ಆ ಜನರ ಹೃದಯದಲ್ಲಿ ಅವರು ಪ್ರೀತಿಯನ್ನು ಹೊರಚಿಮ್ಮಿಸುತ್ತಿದ್ದರು; ಅದನ್ನು ತಾವೇ ಕೊಂಡುಕೊಂಡಿರುವಂತೆ, ಜನರ ಹೃದಯ ಮಿಡಿಯುವಂತೆ ಮಾಡುತ್ತಿದ್ದರು. ಅಲ್ಲಿ ಹಿಂದೂ ಮುಸಲ್ಮಾನರೆಂಬ ಭೇದವಿರುತ್ತಿರಲಿಲ್ಲ.

ಒಂದು ಸ್ಥಳದಲ್ಲಿ ಅವರು, ಇತರ ಸಾಧುಗಳು ಮತ್ತು ಭಕ್ತರು ಶ್ರೀರಾಮಕೃಷ್ಣರ ಉತ್ಸವ ಮಾಡಲು ತೀರ್ಮಾನಿಸಿದರು. ಸ್ವಯಂಸೇವಕರು ಅಲ್ಲಿ ಇಲ್ಲಿ ಹಿಂದೂಗಳಿಂದ ಕಾಣಿಕೆ ಸಂಗ್ರಹಿಸಿದರು. ಅವರು ಮುಸಲ್ಮಾನರ ಬಳಿಗೆ ಹೋಗಲಿಲ್ಲ. ನಿಮಗೆ ತಿಳಿದಂತೆ ಮುಸಲ್ಮಾನರು ತಮ್ಮ ಧರ್ಮದ ಬಗ್ಗೆ ಕಟ್ಟುನಿಟ್ಟಾಗಿರುವರು. ಅವರು ಹಿಂದೂ ಧರ್ಮವನ್ನು ನಂಬುವುದಿಲ್ಲ. ಆದರೆ ಅವರು ಸ್ವಾಮಿ ಪ್ರೇಮಾನಂದರನ್ನು ನೋಡಿದ್ದರು; ಕೆಲವರು ಅವರೊಡನೆ ಮಾತನಾಡಿದ್ದರು. ಸ್ವಾಮಿಗಳ ಬಗ್ಗೆ ಮುಸಲ್ಮಾನರಲ್ಲಿ ಸುದ್ದಿ ಹಬ್ಬಿತ್ತು. ''ಅವರು ಹಿಂದೂ ಸಂತರಾಗಿರಬಹುದು, ಆದರೆ ಅವರು ನಮಗೆ ಪೀರ್ ಕೂಡ'' ಎಂದು ಅವರು ಹೇಳಿದರು. ಪೀರ್ ಎಂದರೆ ಮುಸಲ್ಮಾನ್ ಸಂತರು. ಮುಸಲ್ಮಾನರೆಲ್ಲ ಸೇರಿ ಸ್ವಾಮಿ ಪ್ರೇಮಾನಂದರ ಬಳಿಗೆ ಹೋಗಿ, ''ಉತ್ಸವಕ್ಕೆ ನಮ್ಮ ಕಾಣಿಕೆಯನ್ನು ಕೇಳದಿರುವಂತಹ ತಪ್ಪನ್ನು ನಾವೇನು ಮಾಡಿದ್ದೇವೆ? ನಮ್ಮನ್ನೇಕೆ ಬಿಟ್ಟಿದ್ದೀರಿ?'' ಎಂದು ಕೇಳಿದರು. ಅವರೆಲ್ಲ ಬೇಸರಪಟ್ಟುಕೊಂಡಿದ್ದರು. ಆದ ಕಾರಣ, ಸ್ವಾಮಿ ಪ್ರೇಮಾನಂದರು ಸ್ವಯಂಸೇವಕರನ್ನು ಮುಸಲ್ಮಾನರ ಬಳಿಗೆ ಕಾಣಿಕೆ ತೆಗೆದುಕೊಳ್ಳಲು ಕಳುಹಿಸಿದರು. ಅವರು ಸಂತೋಷದಿಂದ ಕಾಣಿಕೆ ಕೊಟ್ಟರು. ಇಂತಹ ಘಟನೆಗಳು ಅನೇಕ ಸ್ಥಳಗಳಲ್ಲಿ ನಡೆದವು. ಹಿಂದೂಧರ್ಮ ಮತ್ತು ಇಸ್ಲಾಂಧರ್ಮ ಒಂದೇ ಎಂದು ಅವರು ಬೋಧಿಸಬೇಕಾಗಿರಲಿಲ್ಲ; ಅವರು ಹೆಚ್ಚಿನದಾಗಿ ಏನನ್ನೂ ಮಾಡಬೇಕಾಗಿರಲಿಲ್ಲ. ಕೇವಲ ಪ್ರೀತಿಯಿಂದ ಅವರೆಲ್ಲ ಒಂದೇ ಎಂದು ಭಾವಿಸುವಂತೆ ಮಾಡಿದರು.

ಒಂದು ಹಳ್ಳಿಯ ಪ್ರೌಢಶಾಲೆಯಲ್ಲಿ ಒಬ್ಬ ಮುಸಲ್ಮಾನ್ ಅಧ್ಯಾಪಕರಿದ್ದರು. ಅವರು ಸ್ವಾಮಿ ಪ್ರೇಮಾನಂದರನ್ನು ನೋಡಲು ಬಂದರು. ಸ್ವಾಮಿಗಳು ಅವರಿಗೆ ಎಲ್ಲ ಧರ್ಮಗಳೂ ಒಂದೇ; ಮತ್ತು ಶ್ರೀರಾಮಕೃಷ್ಣರು ಹೇಗೆ ಅದನ್ನು ಸಾಧಿಸಿ ತೋರಿಸಿದರು ಎಂದು ಹೇಳಲು ಪ್ರಾರಂಭಿಸಿದರು. ಆಗ ಕೆಲವು ತಿಂಡಿಗಳನ್ನು ತರಲಾಯಿತು. ಆ ಉಪಾಧ್ಯಾಯರು, ''ಸ್ವಾಮಿ, ಎಲ್ಲರೂ ಒಂದೇ ಎಂದು ಹೇಳುವಿರಿ, ನೀವು ಒಂದೇ ತಟ್ಟೆಯಲ್ಲಿ ನನ್ನೊಡನೆ ತಿನ್ನುವಿರಾ?'' ಎಂದು ಕೇಳಿದರು. ಆಗ ಸ್ವಾಮಿಗಳು, ''ಖಂಡಿತವಾಗಿಯೂ ತಿನ್ನುತ್ತೇನೆ'' ಎಂದು ಹೇಳಿದರು. ಅವರು ಅಂಥವರಾಗಿದ್ದರು.

ಕೆಲವು ವರ್ಷಗಳ ಹಿಂದೆ ಅವರು ಶ್ರೀರಾಮಕೃಷ್ಣರಿಂದಲೇ ಧರ್ಮದ ವಿಶ್ವವ್ಯಾಪಿತ್ವದ ಬಗ್ಗೆ ಮರೆಯಲಾಗದ ಪಾಠವನ್ನು ಕಲಿತಿದ್ದರು. ಅದು ೧೯೦೬ರಲ್ಲಿ, ಶ್ರೀರಾಮಕೃಷ್ಣರು ಕಾಲವಾದ ಅನೇಕ ವರ್ಷಗಳ ಬಳಿಕ ನಡೆಯಿತು. ಸ್ವಾಮಿಗಳು ಪವಿತ್ರ ನಗರಿಯಾದ ಪುರಿಯಲ್ಲಿದ್ದರು. ಜಗನ್ನಾಥ ದೇವಾಲಯದ ಮುಂದೆ ಕ್ರೈಸ್ತ ಪ್ರಚಾರಕನೊಬ್ಬ ಯಾತ್ರಿಕರ ಗುಂಪನ್ನುದ್ದೇಶಿಸಿ, ಅವರ ಧರ್ಮ ಎಷ್ಟು ದೋಷಪೂರಿತವಾಗಿದೆ ಎಂದು ಹೇಳುತ್ತಿದ್ದನು. ಅಂಥ ಪವಿತ್ರ ಸ್ಥಳದಲ್ಲಿ ಹಿಂದೂಧರ್ಮದ ಅವಹೇಳನ ಸ್ವಾಮಿಗಳಿಗೆ ಸಹಿಸಲಾಗಲಿಲ್ಲ. 'ಹರಿ ಬೋಲ್, ಹರಿ ಬೋಲ್' ಎಂದು ಅವರು ದೇವರ

ಹೆಸರನ್ನು ಜೋರಾಗಿ ಉಚ್ಚರಿಸಲು ಪ್ರಾರಂಭಿಸಿದರು. ಜನರ ಗುಂಪು ತಕ್ಷಣ ಅದನ್ನು ಮರುಧ್ವನಿಗೊಳಿಸಿತು. ಪ್ರಚಾರಕನ ಧ್ವನಿ ಅದರಲ್ಲಿ ಮುಳುಗಿಹೋಯಿತು. ಆ ರಾತ್ರಿ ಶ್ರೀರಾಮಕೃಷ್ಣರು ಸ್ವಾಮಿಗಳಿಗೆ ಕನಸಿನಲ್ಲಿ ಕಾಣಿಸಿಕೊಂಡು ಜೋರಾಗಿ, ''ನೀನೇಕೆ ಗುಂಪನ್ನು ಚದುರಿಸಿದೆ? ಆ ವ್ಯಕ್ತಿಯೂ ನನ್ನನ್ನೇ ಬೋಧಿಸುತ್ತಿದ್ದನು. ನಾಳೆ ನೀನು ಅವನನ್ನು ಪತ್ತೆಹಚ್ಚಿ ಅವನ ಕ್ಷಮಾಪಣೆ ಬೇಡು'' ಎಂದು ಕೇಳಿದರು. ಮರುದಿನ ಸ್ವಾಮಿಗಳು ಆ ಪ್ರಚಾರಕನನ್ನು ಹುಡುಕಿಕೊಂಡು ಹೋಗಿ ಅವನ ಕ್ಷಮಾಪಣೆ ಕೇಳಿದರು.

ಸ್ವಾಮಿ ಪ್ರೇಮಾನಂದರು, ನಿಮ್ಮ(ಪಾಶ್ಚಾತ್ಯ) ಸಂಪ್ರದಾಯ ಹೇಳುವಂತೆ, ಪೂರ್ವಬಂಗಾಲದ 'ಪೋಷಕ ಸಂತ'ರಾದರು. ಆದರೆ, ಈಗ ಅಲ್ಲಿನ ಪರಿಸ್ಥಿತಿ ಸಂಪೂರ್ಣವಾಗಿ ಬೇರೆಯಾಗಿದೆ. ಅದು ಭಾರತದಿಂದ ಪ್ರತ್ಯೇಕವಾಗಿ ಪೂರ್ವ ಪಾಕಿಸ್ತಾನವಾದ ಮೇಲೆ ಲಕ್ಷೋಪಲಕ್ಷ ಹಿಂದೂಗಳು ಆ ಪ್ರದೇಶವನ್ನು ತೊರೆದರು. ಆದರೆ ಅಂದಿನ ಕಾಲದಲ್ಲಿ ಶ್ರೀರಾಮಕೃಷ್ಣರ ಭಕ್ತರು ಸಹಸ್ರಗಟ್ಟಲೆ ಸಂಖ್ಯೆಯಲ್ಲಿದ್ದರು. ಸ್ವಾಮಿಗಳ ಪ್ರಭಾವ ಎಷ್ಟು ಪ್ರಬಲವಾಗಿತ್ತೆಂದರೆ, ಇಂದಿಗೂ ಕೂಡ ನಮ್ಮ ಸಂಘದ ಸಂನ್ಯಾಸಿಗಳಲ್ಲಿ ಬಹುಭಾಗ ಅಲ್ಲಿಂದ ಬಂದವರಿದ್ದಾರೆ.

ಅವರು ಕೊನೆಯ ಬಾರಿ ಪೂರ್ವ ಬಂಗಾಲಕ್ಕೆ ಹೋದಾಗ ಒಂದು ತಪ್ಪು ಮಾಡಿದರು. ಅದನ್ನು ಅವರು ಮಾಡಬಾರದಾಗಿತ್ತು. ಅದು ಅವರ ಮರಣಕ್ಕೆ ಕಾರಣವಾಯಿತು. ಈ ಕುರಿತು ಎರಡು ಅಭಿಪ್ರಾಯಗಳಿವೆ. ಅವರು ಪ್ರೇಮಮಯರಾಗಿದ್ದರು. ಯಾರಾದರಾಗಲಿ, ಅವರೊಡನೆ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. ಅವರ ಕೊನೆಯ ಭೇಟಿಯಲ್ಲಿ ಯಾರೊಡನೆ ಅವರು ಊಟ ಮಾಡಿದರೋ ಅವರ ನಡತೆ ಚೆನ್ನಾಗಿರಲಿಲ್ಲ. ನೀವು ಅತ್ಯಂತ ಶುದ್ಧರಾಗಿದ್ದರೆ, ನಿಮಗೆ ಅಶುದ್ಧವಾದುದರ ಸಂಪರ್ಕವುಂಟಾದಾಗ, ನಿಮಗೆ ರೋಗ ಬಂದೇ ಬರುವುದು, ಕೆಲವು ವೇಳೆ ಮರಣವೂ ಸಂಭವಿಸುವುದು. 'ಹಲವರ ಪಾಪದಿಂದ ಕ್ರಿಸ್ತ ಶಿಲುಬೆಯ ಮೇಲೆ ಸತ್ತ' ಎಂಬ ಕ್ರೈಸ್ತರ ವಾದ ನಿಜವಲ್ಲವೆಂದು ಭಾವಿಸಬೇಡಿ. ಧರ್ಮಶಾಸ್ತ್ರದ ವಿವರಣೆಯನ್ನು ನೀವು ಒಪ್ಪದಿರಬಹುದು, ಆದರೆ ಅದರ ಸಾರ ನಿಜ. ಯೇಸುಕ್ರಿಸ್ತ, ಪ್ರಪಂಚದಲ್ಲಿ ಜೀವಿಸಿದ್ದ ಅತ್ಯಂತ ಪರಿಶುದ್ಧ ಜೀವಿ ಎಂದು ಸ್ವಾಮೀಜಿ ಹೇಳುತ್ತಿದ್ದರು. ಅವನು ಇತರರ ಪಾಪಗಳನ್ನು ಸ್ವೀಕರಿಸಿ ಅದರಿಂದ ಬಾಧಿತನಾಗದೆ ಇರಲು ಸಾಧ್ಯವೆಂದು ನೀವು ಭಾವಿಸುವಿರಾ? ಇಲ್ಲ. ಅವನು ಆ ಪಾಪಗಳನ್ನೆಲ್ಲ ಸ್ವೀಕರಿಸಿದ. ಅದರ ಫಲವಾಗಿ ತನ್ನ ದೇಹವನ್ನು ತೊರೆದ. ಅದು ಅವನು ತೆರಬೇಕಾದ ದಂಡವಾಗಿತ್ತು.

ಶುದ್ಧವಾದ ದೇಹ ಅಶುದ್ಧವಾದುದನ್ನು ಸ್ವೀಕರಿಸಿದರೆ ಅದು ಹೆಚ್ಚುಕಾಲ ಬದುಕುವುದಿಲ್ಲ, ಅದು ನರಳಿ, ನರಳಿ ಶಿಥಿಲವಾಗಿ ಬಿದ್ದುಹೋಗುವುದು. ಸ್ವಾಮಿ ಪ್ರೇಮಾನಂದರಂತಹ ಮಹಾಚೈತನ್ಯಗಳಿಗೆ ರಕ್ಷಣೆ ಬೇಕಾಗುವುದು. ಅವರು ದೈಹಿಕ ಜೀವನದಿಂದ ಬೇರೆಯಾಗಿರುವರು. ಆದ್ದರಿಂದ ಅವರು ತಮ್ಮ ದೇಹಕ್ಕೆ ಸಂಬಂಧಪಟ್ಟುದನ್ನು ನೋಡಿಕೊಳ್ಳಲಾರರು. ಆದರೂ ಅವರು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಸ್ವಾಮಿ ಪ್ರೇಮಾನಂದರು ಬೇಲೂರು ಮಠದಲ್ಲಿ ಇದ್ದಾಗ ಕೆಲವು ಹಿರಿಯ ಸಂನ್ಯಾಸಿಗಳು ಅವರನ್ನು ನೋಡಿಕೊಳ್ಳುತ್ತಿದ್ದರು. ಆದರೆ ಪೂರ್ವ ಬಂಗಾಲದಲ್ಲಿ ಅವರೇ ಯಜಮಾನರಾಗಿದ್ದರು. ಅವರು ಯಾರ ಮಾತನ್ನು ಕೇಳುವರು? ಸ್ವಾಮಿ ಬ್ರಹ್ಮಾನಂದರು ಕೆಲವು ವೇಳೆ ಅವರೊಡನಿದ್ದಾಗ ಅವರನ್ನು ಆಕ್ಷೇಪಿಸುತ್ತಿದ್ದರು. ಆದರೆ ಯಾರೂ ಇಲ್ಲದಿರುವಾಗ ಅವರು ತಮಗೆ ಇಚ್ಛೆ ಬಂದಂತೆ ಮಾಡಿದರು. ಅವರು ಅಶುದ್ಧವಾದ ಆ ವ್ಯಕ್ತಿಯೊಡನೆ ಊಟ ಮಾಡಿದರು. ಅದೊಂದು ಕೆಲಸವನ್ನು ಅವರು ಮಾಡಬಾರದಾಗಿತ್ತು.

ಇನ್ನೊಂದು ವಿಷಯ. ಪೂರ್ವ ಬಂಗಾಲದ ಭಯಂಕರ ರೋಗ ಹರಡುವ ಕಳೆ, ಹಯಸಿಂತ್. ಅದರಲ್ಲಿ ಸುಂದರವಾದ ಎಳೆ ನೀಲಿ ಬಣ್ಣದ ಹೂವಿದೆ. ಒಬ್ಬ ಆಂಗ್ಲ ಮಹಿಳೆ ಈ ಗಿಡವನ್ನು ಬಂಗಾಲ ದೇಶಕ್ಕೆ ತಂದಳಂತೆ. ಅದು ಮಿತಿ ಮೀರಿ ಹಬ್ಬಿತು. ಅದು ಎಷ್ಟರ ಮಟ್ಟಿಗೆ ಹರಡಿತೆಂದರೆ, ಕೆರೆ, ಕೊಳ, ವಿಶಾಲವಾದ ನದಿಗಳು ಆ ಕಳೆಯಿಂದ ದಟ್ಟವಾಗಿ ಆವೃತವಾದುವು. ಕೆಲವು ವೇಳೆ ವಿಶಾಲವಾದ ನದಿಗಳಲ್ಲಿ ಹಲವು ಮೈಲಿಗಳಷ್ಟು ನೀರು ಮುಚ್ಚಿಹೋಗಿ, ದೊಡ್ಡ ದೋಣಿಗಳು ಮುಂದೆ ಹೋಗಲಾಗದೆ, ಗಾಳಿ ಆ ಸಸ್ಯರಾಶಿಯನ್ನು ತಳ್ಳಿ ತೆರವು ಮಾಡುವವರೆಗೆ ಅನೇಕ ದಿನಗಳ ಕಾಲ ಅವು ನಿಲ್ಲಬೇಕಾಗುತ್ತಿತ್ತು. ಇದೊಂದು ದೊಡ್ಡ ಉಪದ್ರವವಾಯಿತು. ಸ್ವಾಮಿ ಪ್ರೇಮಾನಂದರು ಅಲ್ಲಿಗೆ ಕೊನೆಯ ಬಾರಿ ಹೋದಾಗ ಕೆರೆಗಳೆಲ್ಲಾ ಆ ತೇಲುವ ಗಿಡಗಳ ಬಲೆಯಿಂದ ಆವೃತವಾಗಿದ್ದುದರ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದರು. ''ನಾವೆಲ್ಲರೂ ಹೋಗಿ ಆ ಕಳೆಯನ್ನು ತೆಗೆಯಬಾರದೇಕೆ? ಬನ್ನಿ, ಹೋಗೋಣ'' ಎಂದರು. ಅವರೇ ಆ ತಣ್ಣನೆಯ ನೀರಿಗೆ ಇಳಿದು, ಆ ಗಿಡಗಳನ್ನು ಕಿತ್ತು ದಡಕ್ಕೆ ಎಸೆಯಲು ಪ್ರಾರಂಭಿಸಿದರು. ದಡಕ್ಕೆ ಎಸೆದ ಆ ಗಿಡಗಳು ಒಣಗಿ ಸಾಯುತ್ತವೆ.

ಅಂತಹ ಮಹಾತ್ಮರು ಆ ಬಗೆಯ ದೈಹಿಕ ಶ್ರಮಕ್ಕೆ ಹೇಳಿದವರಲ್ಲ; ಆದರೆ, ನಾನು ನಿಮಗೆ ತಿಳಿಸಿದಂತೆ, ಅವರು ಎಷ್ಟೇ ಕಷ್ಟವಾದರೂ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಭಾಗಶಃ ಈ ಕೆಲಸದಿಂದ ಮತ್ತು ಭಾಗಶಃ ಅಶುದ್ಧವಾದುದನ್ನು ಸೇವಿಸಿದುದರಿಂದ ಕಾಲಾ-ಅಜಾರ್ ಎಂಬ ನಿಂತ ನೀರಿನಿಂದ ಬರುವ ಭಯಂಕರ ಜ್ವರಕ್ಕೆ ತುತ್ತಾದರು. ಆ ಕಾಲದಲ್ಲಿ ಅದಕ್ಕೆ ಔಷಧಿ ಇರಲಿಲ್ಲ. ಅದಕ್ಕೆ ತುತ್ತಾದವರು ಬದುಕುತ್ತಿರಲಿಲ್ಲ. ಸ್ವಾಮಿ ಪ್ರೇಮಾನಂದರು ಕಲ್ಕತ್ತೆಯಲ್ಲಿ ದೀರ್ಘ ಕಾಲದ ಔಷಧೋಪಚಾರಗಳಿಂದ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡ ಬಳಿಕ, ವಿಶ್ರಾಂತಿಗಾಗಿ ಪರ್ವತ ಪ್ರದೇಶಕ್ಕೆ ಹೋದರು. ಆದರೆ ಆ ಸಮಯದಲ್ಲಿ ಪ್ರಪಂಚಾದ್ಯಂತ ಹರಡಿದ್ದ